# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

**ಕೇಂದ್ರ ಕಛೇರಿ : ಸಂಚಾರ ಇಲಾಖೆ**

ಸಂಖ್ಯೆ ಕರಾಸಾ:ಕೇಕ:ಸಂ:ಸಾ:ಟಿ.3.46: 4796 :17-18 ದಿನಾಂಕ: 03-11-2017

**ಸುತ್ತೋಲೆ ಸಂಖ್ಯೆ : 1407/2017**

(ಸಂಚಾರ ಇಲಾಖೆಯಿಂದ ಹೊರಡಿಸಲಾಗಿದೆ)

ವಿಷಯ: ತಮಿಳುನಾಡು ರಾಜ್ಯದ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 67 ರ ಕರೂರು-ತಿರುಚಿ ಮಾರ್ಗದಲ್ಲಿ ಬರುವ **ತಿರುಪರತುರೈ ಬಳಿ** ನಿರ್ಮಿಸಿರುವ ನೂತನ ಟೋಲ್ ಮುಖಾಂತರ ಕಾರ್ಯಾಚರಣೆ ಮಾಡುವ ನಿಗಮದ ವಾಹನಗಳಿಗೆ ಬಳಕೆದಾರ ಶುಲ್ಕ ಸಂದಾಯ ಮಾಡುವ ಬಗ್ಗೆ.

ಉಲ್ಲೇಖ: ಸುತ್ತೋಲೆ ಸಂಖ್ಯೆ:1311, ಕರಾಸಾ:ಕೇಕ:ಸಂ:ಸಾ:ಟಿ-3.46:4977:15-16 ದಿನಾಂಕ: 28.10.2015

******

ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 81 ರಲ್ಲಿ ತಮಿಳುನಾಡು ರಾಜ್ಯದಲ್ಲಿ ಬರುವ ಕರೂರು-ತಿರುಚಿ (154.400 ರಿಂದ 176.976 ಕಿ.ಮೀ.ಗಳವರೆಗೆ) ಮಾರ್ಗದಲ್ಲಿ ಚತುಷ್ ಪಥ್ ರಸ್ತೆ ನಿರ್ಮಿಸಿದ್ದು, ಸದರಿ ಮಾರ್ಗದ ಮೂಲಕ ಕಾರ್ಯಾಚರಣೆಯಾಗುವ ನಿಗಮದ ಸಾರಿಗೆಗಳಿಗೆ ಬಳಕೆದಾರರ ಶುಲ್ಕವನ್ನು ಪಾವತಿಸಲು ಹಾಗೂ ಸದರಿ ಪಾವತಿಯಿಂದ ಉಂಟಾಗುವ ಆರ್ಥಿಕ ಹೊರೆಯನ್ನು ಸರಿದೂಗಿಸಲು ಸದರಿ ರಸ್ತೆಗಳ ಮುಖಾಂತರ ಆಚರಿಸಲಾಗುವ ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರಿಂದ ಬಳಕೆದಾರ ಶುಲ್ಕವನ್ನು ವಸೂಲು ಮಾಡುವ ಬಗ್ಗೆ ಈಗಾಗಲೇ ಉಲ್ಲೇಖಿತ ಸುತ್ತೋಲೆಯಲ್ಲಿ ತಿಳಿಸಲಾಗಿರುತ್ತದೆ.

**ತಿರುಪರತುರೈ ಟೋಲ್** ನ ಬಳಕೆದಾರರ ಶುಲ್ಕದ ವಿವರ ಹಾಗೂ ಪ್ರಯಾಣಿಕರಿಂದ (ವಯಸ್ಕರು ಮತ್ತು ಪ್ರಯಾಣ ದರ ವಿಧಿಸಬಹುದಾದ ಮಕ್ಕಳು) ಪಡೆಯಬೇಕಾದ ಮೊತ್ತದ ವಿವರ ಈ ಕೆಳಕಂಡಂತಿರುತ್ತದೆ.

| ವಾಹನ | ಪಾವತಿಸುತ್ತಿರುವ ಬಳಕೆದಾರರ ಶುಲ್ಕ (ರೂ.ಗಳಲ್ಲಿ) | | | **ಅನುಮತಿಸಿರುವ ಪರಿಷ್ಕೃತ ಬಳಕೆದಾರರ ಶುಲ್ಕ (ರೂ.ಗಳಲ್ಲಿ)** | | |
|---|---|---|---|---|---|---|
| | ಏಕ ಸುತ್ತುವಳಿ | ಬಹು ಸುತ್ತುವಳಿ | ಪ್ರಯಾಣಿಕರಿಂದ ಪಡೆಯುತ್ತಿದ್ದ ಶುಲ್ಕ | **ಏಕ ಸುತ್ತುವಳಿ** | **ಬಹು ಸುತ್ತುವಳಿ** | **ಪ್ರಯಾಣಿಕರಿಂದ ಪಡೆಯಬೇಕಾದ ಶುಲ್ಕ** |
| ರಾಜಹಂಸ | 82/- | 122/- | 4/- | 85/- | 125/- | 4/- |
| ಸ್ಲೀಪರ್ | - | - | - | 85/- | 125/- | 4/- |
| ಮಲ್ಟಿ ಆಕ್ಸಲ್ | 120/- | 197/- | 4/- | 135/- | 200/- | 5/- |

ತಿರುಪರತುರೈ ಟೋಲ್ ಮೂಲಕ ನಿಗಮದ ಸ್ಲೀಪರ್ ಸಾರಿಗೆಗಳಲ್ಲಿ ಪ್ರಯಾಣಿಸುವ ತಲಾ ಪ್ರಯಾಣಿಕರಿಂದ ರೂ.4/- ರಂತೆ ಹಾಗೂ ಮಲ್ಟಿ ಆಕ್ಸಲ್ ಸಾರಿಗೆಗಳಲ್ಲಿ ಪ್ರಯಾಣಿಸುವ ತಲಾ ಪ್ರಯಾಣಿಕರಿಂದ ರೂ.4/- ರ ಬದಲಾಗಿ ರೂ.5/-ರಂತೆ ಬಳಕೆದಾರರ ಶುಲ್ಕವನ್ನು ಆಕರಣೆ ಮಾಡುವುದು. ರಾಜಹಂಸ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರಿಂದ ಹಾಲಿ ಆಕರಣೆ ಮಾಡುತ್ತಿರುವ ರೂ.4/- ರಂತೆ ಬಳಕೆದಾರರ ಶುಲ್ಕದ ಆಕರಣೆಯನ್ನು ಮುಂದುವರೆಸುವುದು.

ಈ ಸುತ್ತೋಲೆ ಹೊರಡಿಸುವವರೆಗೆ ಹೆಚ್ಚುವರಿಯಾಗಿ ಸಂದಾಯ ಮಾಡಲಾಗಿರುವ ಬಳಕೆದಾರ ಶುಲ್ಕದ ಮೊತ್ತವನ್ನು ಮಂಜೂರು ಮಾಡಲಾಗಿದೆ. ಸುತ್ತೋಲೆಯ ಸೂಚನೆಗಳು ತಕ್ಷಣದಿಂದ ಜಾರಿಗೆ ಬರುತ್ತವೆ. ಸುತ್ತೋಲೆಯನ್ನು ಸ್ವೀಕರಿಸಿದ ಬಗ್ಗೆ ಸ್ವೀಕೃತಿಯನ್ನು ಹಾಗೂ ಕೈಗೊಂಡ ಕ್ರಮದ ಬಗ್ಗೆ ಅನುಸರಣಾ ವರದಿಯನ್ನು ನೀಡುವುದು.

ಪ್ರಧಾನ ವ್ಯವಸ್ಥಾಪಕರು (ಸಂಚಾರ)

ಪ್ರತಿಯನ್ನು :

ವ್ಯವಸ್ಥಾಪಕ ನಿರ್ದೇಶಕರು, ಬೆಮಸಾಸಂ/ವಾಕರಸಾಸಂ/ಈಕರಸಾಸಂ ರವರಿಗೆ ಮಾಹಿತಿಗಾಗಿ.

ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾನಿ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.

ಎಲ್ಲಾ ವಿಭಾಗ ನಿಯಂತ್ರಣಾಧಿಕಾರಿಗಳು, ಕರಾರಸಾನಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಮುಖ್ಯ ಸಂಚಾರ ವ್ಯವಸ್ಥಾಪಕರು, ವಾಕರಸಾಸಂಸ್ಥೆ/ಈಕರಸಾಸಂಸ್ಥೆ, ಹುಬ್ಬಳ್ಳಿ/ಕಲಬುರಗಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

ವಿಭಾಗ ಸಂಚಲನಾಧಿಕಾರಿ, ಕರಾರಸಾ ನಿಗಮ, ಅವತಾರ್ ಶಾಖೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

ಹಿರಿಯ/ಆಪ್ತ ಕಾರ್ಯದರ್ಶಿ/ವಿಶೇಷ ಕರ್ತವ್ಯಾಧಿಕಾರಿ, ಅಧ್ಯಕ್ಷರು/ಉಪಾಧ್ಯಕ್ಷರು/ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಭ:ಜಾ)/ ನಿರ್ದೇಶಕರು(ಸಿ:ಪ)/ಮುಖ್ಯ ಲೆಕ್ಕಾಧಿಕಾರಿ ಹಾಗೂ ಆ.ಸ, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.